ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು. ದಿನಾಂಕಃ 04.02.2026

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಕೆ ಕೆ ಆರ್ ವಕೀಲರಿಂದಃ**

1. ನಿಪಿ 16 ನನ್ನ ಹಕ್ಕು ಮತ್ತು ಮಾಲೀಕತ್ವವನ್ನು ನಿರೂಪಿಸುವ ದಾಖಲೆಗಳು ಎಂದರೆ ಸರಿಯಲ್ಲ. ಸಾಕ್ಷಿಗೆ ನಿಪಿ 16 ನ್ನು ತೋರಿಸಲಾಗಿ ಅದರಲ್ಲಿ ಎಲ್ಲಿ ಹಕ್ಕು ಮತ್ತು ಮಾಲೀಕತ್ವವನ್ನು ತೋರಿಸಲಾಗಿದೆ ಎಂದರೆ ಸಾಕ್ಷಿ ಆ ರೀತಿ ನಮೂದಿಸಿಲ್ಲ ಎನ್ನುತ್ತಾರೆ. ನಿಪಿ 16 ಪ್ರತಿವಾದಿ ಕುಟಂಬದ ದಾಖಲೆ ಎಂದರೆ ಸರಿಯಲ್ಲ. ಅದು 2ನೆ ಪ್ರತಿವಾದಿಯ ತಂದೆ ವಂಶಸ್ಥರದ್ದು ಎಂದರೆ ಸರಿಯಲ್ಲ. ಅದರಂತೆ ನಿಪಿ 17 ಪ್ರತಿವಾದಿ ಕುಟುಂಬದ ದಾಖಲೆ ಎಂದರೆ ಸರಿಯಲ್ಲ. ದಪಿ 17 ರಲ್ಲಿ ಇರುವ ಆಸ್ತಿಯು 21 ಗುಂಟೆ ಎಂದು ಸ್ಪಷ್ಟವಾಗಿದೆ. ಇದು ಪ್ರತಿವಾದಿ ಕುಟುಂಬದ ಗೌರಮ್ಮರವರಿಗೆ ಸೇರಿದ್ದು ಎಂದರೆ ಸರಿಯಲ್ಲ.

ನಿಪಿ 18ನ್ನು ನಾನೇ ಹಾಜರಿಸಿದ್ದೇನೆ. ಅದರ ಪ್ರಕಾರ ಬಸವರಾಜ ಬಿನ್ ಲೇಟ್ ದಾಳಪ್ಪಶೆಟ್ಟಿ ಎಂದರೆ ನಾನೇ. ಇದು ಈ ದಾವೆಯ 2ನೇ ಪ್ರತಿವಾದಿಯಿಂದ ಆಸ್ತಿಯನ್ನು ಕ್ರಯಕ್ಕೆ ಪಡೆದ ಟಿ ನಾಗರಾಜು ಹೂಡಿದ್ದರೆಂದರೆ ಸರಿ.

ಸರ್ವೇ ನಂ 139/1 ರ ಸ್ವತ್ತುನ್ನು ಕ್ರಯಕ್ಕೆ ಪಡೆದ 1ನೇ ಪ್ರತಿವಾದಿಯಾದ ಟಿ ನಾಗರಾಜುರವರೇ ಉಳುಮೆ ಮಾಡುತ್ತಿದ್ದಾರೆಂದರೆ ಸರಿಯಲ್ಲ. ನಿಪಿ 18 ರ ದಾವೆಯನ್ನು ಹಕ್ಕು ಘೋಷಣಾ ದಾವೆ ಚಾಲ್ತಿಯಲ್ಲಿರುವ ಕಾರಣ ವಜಾಗೊಳಿಸಲಾಗಿದೆ ಎಂದರೆ ಸರಿಯಲ್ಲ. ನಾನು ಹಾಜರಿಸಿದ್ದ ನಿಪಿ 10 ನೋಂದಣಿರಹಿತ ದಾಖಲೆ ಎಂದರೆ ಸರಿಯಲ್ಲ. ನಿಪಿ 10ನ್ನು ನಾನು ಪ್ರತಿವಾದಿಯ ಸ್ವತ್ತನ್ನು ಸೃಷ್ಟಿಸಿ ತಂದು ಹಾಜರಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು 2ನೇ ಪ್ರತಿವಾದಿಯ ತಂದೆಗೆ 1983-84 ರಲ್ಲಿ ಎಂ ಆರ್ ಆಗಿರುತ್ತದೆ ಎಂದರೆ ಸಾಕ್ಷಿ ಅವರು ಮೋಸದಿಂದ ಮಾಡಿರುತ್ತಾರೆ ಎನ್ನುತ್ತಾರೆ. ನಂತರ ದಾವಾ ಸ್ವತ್ತು 2ನೇ ಪ್ರತಿವಾದಿಗೆ ಕುಟುಂಬದ ವಿಭಾಗದ ಮೂಲಕ ಬಂದ ಸ್ವತ್ತು ಎಂದರೆ ಸರಿಯಲ್ಲ. ನಾವು ಪ್ರತಿವಾದಿಯ ಕುಟುಂಬಸ್ಥರಾದ ಗೌರಮ್ಮ ರವರ ಹೆಸರಿನಲ್ಲಿರುವ ದಾಖಲೆಗಳನ್ನು ದುರುಪಯೋಗ ಪಡಿಸಿಕೊಂಡು ಹೂಡಿದ್ದೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತು 2ನೇ ಪ್ರತಿವಾದಿಯಿಂದ 1ನೇ ಪ್ರತಿವಾದಿಗೆ ನಿಪಿ 8 ರ ಪ್ರಕಾರ ವರ್ಗಾವಣೆಗೊಂಡಿದೆ ಎಂದರೆ ಸರಿಯಲ್ಲ. ಈ ದಾವೆಯು ಕಾಲಬಾದಕದಿಂದ ಕೂಡಿದೆ ಎಂದರೆ ಸರಿಯಲ್ಲ. ಸರ್ವೇ ನಂ 139/1 1ನೇ ಪ್ರತಿವಾದಿ ಹೆಸರಿಗೆ ಕಂದಾಯ ದಾಖಲಾತಿಗಳಲ್ಲಿ ವರ್ಗಾವಣೆ ಮಾಡಿಕೊಂಡಿದ್ದಾರೆ ಎಂದರೆ ಮೋಸದಿಂದ ಮಾಡಿದ್ದಾರೆ ಎನ್ನುತ್ತಾರೆ. 2ನೇ ಪ್ರತಿವಾದಿ ಈ ವರ್ಗಾವಣೆಗೆ ಮುನ್ನ ರಾಷ್ಟ್ರೀ ಕೃತ ಬ್ಯಾಂಕಿನಲ್ಲಿ ದಾವಾ ಸ್ವತ್ತಿನ ಮೇಲೆ ಸಾಲ ಪಡೆದಿದ್ದರು ಎಂದು ನನಗೆ ತಿಳಿದಿದೆ ಎಂದರೆ ಸರಿಯಲ್ಲ. ಅದೇ ರೀತಿ ಅವರ ತಂದೆಯು ಪಿ ಎಲ್ ಡಿ ಬ್ಯಾಂಡಿನಲ್ಲಿ ಸಾಲ ಪಡೆದಿದ್ದರು ಎಂದರೆ ಅದು ಮೋಸದಿಂದ ಎನ್ನುತ್ತಾರೆ. 2ನೇ ಪ್ರತಿವಾದಿಗಳು ದಾವಾ ಸ್ವತ್ತಿನ ಅನುಬೋಗದಲ್ಲಿದ್ದಾಗ ನಾನು ಯಾವುದೇ ತಕರಾರು ಮಾಡಿಲ್ಲ

ಮತ್ತು 1ನೇ ಪ್ರತಿವಾದಿ ದಾವಾ ಆಸ್ತಿ ಖರೀದಿಸಿದ ನಂತರ ಈ ಸುಳ್ಳು ದಾವೆ ಹೂಡಿದ್ದೇನೆಂದರೆ ಸರಿಯಲ್ಲ. ನನ್ನ ದಾಖಲಾತಿಗಳ ಪ್ರಕಾರ ದಾವಾ ಆಸ್ತಿಯಲ್ಲಿ ಸುಮಾರು 40 ವರ್ಷಗಳಿಂದ 2ನೇ ಪ್ರತಿವಾದಿ ಮತ್ತು ಅವರ ಕುಟುಂಬಸ್ಥರು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ.

**ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಸಮಾಯಾಕಾಶ ನೀಡಿ ಮುಂದೂಡಿಲಾಯಿತು.**

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ**

**ಸಿವಿಲ್ ಜಡ್ಜ್ ಮತ್ತು ಜೆ ಎಮ್ ಎಫ್ ಸಿ,**

**ಹೊಳೆನರಸೀಪುರ**